# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013ರ ಮುಂಗಾರು ಹಂಗಾಮಿನಲ್ಲಿ ಬೆಳೆಯಲಾದ ಬಿ.ಟಿ.ಹತ್ತಿ ಬೆಳೆಯು ಕೆಲವು ಜಿಲ್ಲೆಗಳಲ್ಲಿ ವಿಫಲತೆಯಾಗಿರುವ ಸಂಬಂಧ ರೈತರಿಗೆ ನೆರವು ನೀಡುವ ಕುರಿತು.

**ಓದಲಾಗಿದೆ :**

1) ಸರ್ಕಾರದ ಆದೇಶ ಸಂಖ್ಯೆ:ಕೃಇ/45/ಕೃಯೋಕಾ/2014, ದಿ:11.04.2014
2) ದಿನಾಂಕ:28 & 29.10.2013ರಂದು ರಾಜ್ಯ ಮಟ್ಟದಲ್ಲಿ ನಡೆದ ಸಭೆಯ ನಡವಳಿ.
3) ದಿನಾಂಕ: 20-02-2014 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ 2013-14ನೇ ಸಾಲಿನಲ್ಲಿ ಕೃಷಿ ಇಲಾಖೆಯ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2014-15ನೇ ಸಾಲಿನಲ್ಲಿ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2) ರ ನಡವಳಿಯನ್ವಯ ದಿನಾಂಕ:20-2-2014 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, 2013ರ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಬಿ.ಟಿ.ಹತ್ತಿ ಬೆಳೆ ಹಾನಿ ಕುರಿತು ರಾಜ್ಯದಲ್ಲಿ ಒಟ್ಟು 70.58 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಕಾರ್ಯ ಕೈಗೊಳ್ಳಲಾಗಿದ್ದು, ಈ ಪೈಕಿ ಬಿಟಿ ಹತ್ತಿಯನ್ನು 5.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿರುತ್ತದೆ. 2013ರ ಮುಂಗಾರು ಹಂಗಾಮಿನಲ್ಲಿ ಬೆಳಗಾವಿ, ಹಾವೇರಿ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ್, ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಹಿಕೋ ಕಂಪನಿಯಿಂದ ವಿತರಿಸಲಾದ ಬಿ.ಟಿ.ಹತ್ತಿ ಕನಕ (ಎಂ ಆರ್ ಸಿ-7351) ಮತ್ತು ನಿಕ್ಕಿಪ್ಲಸ್ ತಳಿಗಳು,ಕೆಲವು ಕ್ಷೇತ್ರಗಳಲ್ಲಿ ಹಾನಿಗೊಳಗಾಗಿದ್ದು, ಈ ಬಗ್ಗೆ ಸಂಬಂಧಿಸಿದ ಜಿಲ್ಲೆಗಳಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿಜ್ಞಾನಿಗಳು ಇಲಾಖೆಯ ಅಧಿಕಾರಿಗಳೊಂದಿಗೆ ಕ್ಷೇತ್ರ ಪರಿಶೀಲನೆ ನಡೆಸಿ, ಪ್ರಾಥಮಿಕ ವರದಿ ನೀಡಿರುತ್ತಾರೆ. 2013ರ ಮುಂಗಾರು ಹಂಗಾಮಿನಲ್ಲಿ ಕೆಲವು ಜಿಲ್ಲೆಗಳಲ್ಲಿ ಮಹಿಕೋ ಕಂಪನಿಯಿಂದ ವಿತರಿಸಲಾದ ಬಿಟಿ ಹತ್ತಿ ತಳಿಯು ಕೆಲವು ಕ್ಷೇತ್ರಗಳಲ್ಲಿ ಮಿರಿಡ್ ತಿಗಣೆ, ಮಿಡ್ಜ್ ನೊಣ ಹಾಗೂ ರಸ ಹೀರುವ ಕೀಟಗಳ ಭಾದೆಯಿಂದ ಹಾನಿಗೊಳಗಾಗಿದ್ದು, ಕಾಯಿಕಟ್ಟುವಲ್ಲಿ ಕುಂಠಿತವಾಗಿದ್ದು, ಇಳುವರಿ ಮೇಲೆ ಪರಿಣಾಮ ಉಂಟಾಗಿದ್ದರಿಂದ ತೊಂದರೆಗೊಳಗಾದ ರೈತರಿಗೆ ನೆರವು ನೀಡಲು ಆಗ್ರಹ ಪಡಿಸಿರುತ್ತಾರೆ ಎಂದು ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದಲ್ಲಿ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ, ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು, ಕೃಷಿ ಇಲಾಖೆ ಹಾಗೂ ಮಹಿಕೋ ಸಂಸ್ಥೆಯ ಉನ್ನತ ಅಧಿಕಾರಿಗಳೊಂದಿಗೆ ಅನೇಕ ಸಭೆಗಳನ್ನು ನಡೆಸಲಾಗಿರುತ್ತದೆ. ದಿನಾಂಕ 29-10-2013 ರಂದು ನಡೆದ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ, ಸಂಕಷ್ಟಕ್ಕೊಳಗಾದ ರೈತರ ನೆರವಿಗೆ ಅನುವಾಗುವಂತೆ ಹಾನಿಗೊಳಗಾದ ಕ್ಷೇತ್ರಗಳಲ್ಲಿ, ಬಿ.ಟಿ. ಹತ್ತಿ ಕನಕ ಮತ್ತು ನಿಕ್ಕಿಪ್ಲಸ್ ಬೆಳೆಯಲ್ಲಿ ಬಿತ್ತನೆಯಾದ ವಿಸ್ತೀರ್ಣ ಹಾಗೂ ಹಾನಿಗೊಳಗಾದ ವಿಸ್ತೀರ್ಣವನ್ನು ಪರಿಗಣಿಸಿ, ಇಳುವರಿಯಲ್ಲಿ ಶೇಕಡ 50ಕ್ಕಿಂತ ಹೆಚ್ಚು ಹಾನಿಗೊಳಗಾದ ಕ್ಷೇತ್ರಗಳನ್ನು ನಿಖರವಾಗಿ ಗುರುತಿಸಲು ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ ಕೃಷಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, (ಕಂದಾಯ ಇಲಾಖೆ, ಕೃಷಿ ಇಲಾಖೆ, ಜಲಾನಯನ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ) ಮಹಿಕೋ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳನ್ನೊಳಗೊಂಡಂತೆ ಜಂಟಿ ಸಮೀಕ್ಷಾ ತಂಡಗಳಿಂದ ಸಮೀಕ್ಷೆ ಕೈಗೊಳ್ಳಲಾಗಿರುತ್ತದೆ ಎಂದು ತಿಳಿಸಲಾಗಿದೆ. ಮಹಿಕೋ ಸಂಸ್ಥೆಯು ಸಮೀಕ್ಷೆಯ ಅಂತಿಮ ವರದಿಯನ್ನು ಒಪ್ಪಿಕೊಳ್ಳತಕ್ಕದ್ದು ಹಾಗೂ ಅದರಂತೆ ರೈತರಿಗೆ ಆರ್ಥಿಕ ನೆರವು ನೀಡಲು ಬದ್ಧರಾಗಿರತಕ್ಕದ್ದು ಎಂದು ಸದರಿ ಸಭೆಯಲ್ಲಿ ಸಂಸ್ಥೆಯ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ ಎಂದು ತಿಳಿಸಲಾಗಿದೆ.

.......2

ಹಾನಿಗೊಳಗಾಗಿರುವ ಬಿಟಿ.ಹತ್ತಿ ತಳಿಗಳ ತಳಿ ಶುದ್ಧತೆಯನ್ನು ಪರೀಕ್ಷಿಸಲು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡದ ಸಹಯೋಗದೊಂದಿಗೆ Grow Out Test ಪರೀಕ್ಷೆ ನಡೆಸಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದ ಸಮಿತಿಯು ಕ್ಷೇತ್ರ ಮಟ್ಟದ ಸಮೀಕ್ಷಾ ತಂಡಗಳು ನೀಡಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಅಂತಿಮವಾಗಿ ನೆರವು ನೀಡಬೇಕಾದ ರೈತರ ಪಟ್ಟಿಯನ್ನು ಅಖೈರುಗೊಳಿಸಿ ವರದಿ ಸಲ್ಲಿಸಿದ್ದು, ಜಂಟಿ ಸಮೀಕ್ಷೆಯ ವರದಿಯಂತೆ ಸದರಿ ಜಿಲ್ಲೆಗಳಲ್ಲಿ ಹವಾಮಾನ ವೈಪರೀತ್ಯ ಬೀಜ ದೋಷ ಹಾಗೂ ಕೀಟ ಬಾಧೆಯ ಕಾರಣಗಳಿಂದ ಬೆಳೆ ಹಾನಿಯಾಗಿರುವುದಾಗಿ ತಿಳಿದು ಬಂದಿದೆ.

ಸಮೀಕ್ಷೆಯನ್ವಯ ಸದರಿ ಜಿಲ್ಲೆಗಳಲ್ಲಿ ಒಟ್ಟು 58195 ಹೆಕ್ಟೇರ್ ಪ್ರದೇಶವು ಶೇ 50ಕ್ಕಿಂತ ಹೆಚ್ಚು ಹಾನಿಯಾಗಿದ್ದು ಪ್ರತಿ ಹೆಕ್ಟೇರ್‌ಗೆ ಬಿತ್ತನೆ ಬೀಜದ ವೆಚ್ಚ ಅಂದಾಜು 2400/-ಗಳಷ್ಟಿರುತ್ತದೆ.

ಸರ್ಕಾರದ ಸತತ ಪ್ರಯತ್ನದಿಂದಾಗಿ ಮೆ॥ ಮಹಿಕೋ ಸಂಸ್ಥೆಯು ಈಗಾಗಲೇ 10.00ಕೋಟಿ ರೂ.ಗಳನ್ನು ಪಾವತಿಸಿದ್ದು, ಸದರಿ ಹಣವನ್ನು ಕೃಷಿ ಆಯುಕ್ತರಿಗೆ ರೈತರಿಗೆ ನೆರವು ನೀಡಲು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕೋರಿ ವರ್ಗಾಯಿಸಿದೆ. ಮೆ॥ಮಹಿಕೋ ಸಂಸ್ಥೆ ವತಿಯಿಂದ ಇನ್ನೂ 24.92 ಕೋಟಿ ರೂ.ಗಳನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ. ಇದಲ್ಲದೇ ಕಳಪೆ ಬೀಜ ಪೂರೈಕೆ ಮಾಡಿರುವ ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಹಾಗೂ ನಿಷೇಧ ಮಾಡಲು ಪರಿಶೀಲಿಸಲಾಗುತ್ತಿದೆ. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರ ಪರಿಹಾರ ನೀಡಬೇಕೆಂದು ಸಭೆಯಲ್ಲಿದ್ದ ಶಾಸಕರು ಮತ್ತು ರೈತ ಮುಖಂಡರು ಮನವಿ ಮಾಡಿರುತ್ತಾರೆ. ಎಲ್ಲಾ ವಿವರಗಳನ್ನು ಧೀರ್ಘವಾಗಿ ಚರ್ಚಿಸಿದ ನಂತರ ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡಂತೆ ತೀರ್ಮಾನ ಕೈಗೊಂಡಿರುತ್ತಾರೆ.

1. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ಪರಿಹಾರ ನೀಡಲು ಅವಕಾಶವಿಲ್ಲವಾದ್ದರಿಂದ ಸರ್ಕಾರವು ರೈತರ ಹಿತ ಕಾಪಾಡಲು 7 ಜಿಲ್ಲೆಗಳಲ್ಲಿ ಹಾನಿಗೊಳಗಾದ ರೈತರಿಗೆ ಪ್ರತಿ ಹೆಕ್ಟೇರ್‌ಗೆ 6000/- ರೂ.ನಂತೆ ನೆರವು ನೀಡತಕ್ಕದ್ದು.
2. ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೊಳಿಸಿರುವ ಹತ್ತಿ ಬೀಜ ಕಾಯ್ದೆ-2009 ರಂತೆ ಕರ್ನಾಟಕ ರಾಜ್ಯದಲ್ಲಿ ಸಹ ಸೂಕ್ತ ಬೀಜ ಕಾಯಿದೆಯನ್ನು ಜಾರಿಗೊಳಿಸಲು ಕೃಷಿ ಇಲಾಖೆಯು ಕ್ರಮ ವಹಿಸತಕ್ಕದ್ದು.
3. ಕೃಷಿ ಇಲಾಖೆಯು ಕೃಷಿ ಪರಿಕರಗಳ ಗುಣ ನಿಯಂತ್ರಣವನ್ನು ತೀವ್ರಗೊಳಿಸಿ, ಸಕಾಲದಲ್ಲಿ ಗುಣ ಮಟ್ಟದ ಬಿತ್ತನೆ ಬೀಜ ಪೂರೈಕೆಗೆ ಕ್ರಮ ಕೈಗೊಳ್ಳತಕ್ಕದ್ದು.
4. ರಾಜ್ಯದ 7 ಜಿಲ್ಲೆಗಳಲ್ಲಿ ಹಾನಿಗೊಳಗಾದ ಒಟ್ಟು ವಿಸ್ತೀರ್ಣಕ್ಕೆ 58195 ಹೆಕ್ಟೇರ್‌ಗೆ ಪರಿಹಾರ ನೀಡಲು ಒಟ್ಟು ರೂ. 34.92 ಕೋಟಿಗಳ ಅವಶ್ಯಕತೆಯಿರುತ್ತದೆ. ಮಹಿಕೋ ಸಂಸ್ಥೆ ವತಿಯಿಂದ ಈಗಾಗಲೇ 10.00ಕೋಟಿ ರೂ.ಗಳು ಬಂದಿರುವುದರ ಜೊತೆಗೆ ಉಳಿಕೆ ಹಣವನ್ನು ಕೂಡ ಪಡೆದುಕೊಳ್ಳಲು ಕ್ರಮವಹಿಸತಕ್ಕದ್ದು.
5. ಉಳಿದ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಕ್ರಮವಹಿಸುವುದು.

ಮಾನ್ಯ ಮುಖ್ಯಮಂತ್ರಿಯವರು ದಿನಾಂಕ 20.02.2014ರಂದು ತೆಗೆದುಕೊಂಡ ನಿರ್ಣಯದಂತೆ ಮೆ॥ಮಹಿಕೋ ಕಂಪನಿ ರೂ.10.00 ಕೋಟಿಗಳ ಪರಿಹಾರವನ್ನು ಈಗಾಗಲೇ ನೀಡಲಾಗಿದ್ದು, ಇನ್ನುಳಿದ ಅನುದಾನ ಸರ್ಕಾರದಿಂದ ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

....3

**ಸರ್ಕಾರಿ ಆದೇಶ ಸಂ. ಕೃಇ/27/ಕೃರಾಗೊ/2013 ಬೆಂಗಳೂರು**
**ದಿನಾಂಕ 05.05.2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2013ರ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಏಳು ಜಿಲ್ಲೆಗಳಾದ ಹಾವೇರಿ, ಬೆಳಗಾವಿ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ್ ಮತ್ತು ಬಳ್ಳಾರಿಗಳಲ್ಲಿ ಬಿಟಿ ಹತ್ತಿ ಬೆಳೆಹಾನಿಗಾಗಿ ಪರಿಹಾರ ವಿತರಿಸಲು ಮೆ॥ ಮಹಿಕೋ ಸಂಸ್ಥೆಯಿಂದ ಉಳಿದ ಮೊತ್ತ ರೂ.25.00 ಕೋಟಿ ಹಣ ಬಂದ ಕೂಡಲೇ ಸರ್ಕಾರಕ್ಕೆ ಜಮೆ ಮಾಡುವ ಷರತ್ತಿಗೊಳಪಟ್ಟು ರೂ.25.00ಕೋಟಿ (ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಈ ವೆಚ್ಚವನ್ನು 2014-15ನೇ ಸಾಲಿನ ಲೆಕ್ಕಶೀರ್ಷಿಕೆ:2401-00-800-1-40-059(ಯೋಜನೆ)ಅಡಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಬಿಡುಗಡೆ ಮಾಡಲಾದ ರೂ.25.00 ಕೋಟಿಗಳನ್ನು ಸಂಬಂದಿಸಿದ ಆಯಾ ಜಿಲ್ಲಾಧಿಕಾರಿಗಳ ಮುಖಾಂತರ ಬಿಟಿ ಹತ್ತಿ ಬೆಳೆ ಹಾನಿಗಾಗಿ ರೈತರಿಗೆ ಪರಿಹಾರ ವಿತರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ/187/ವೆಚ್ಚ-4/2014,ದಿ:3-05-2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

5/5/14
(ಮಂಜುನಾಥ್ ಪಾಟೀಲ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ(ಯೋಜನೆ)

**ಇವರಿಗೆ:-**

1. ಪಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
2. ಪಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
3. ಪಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
6. ಸಂಬಂದಪಟ್ಟ ಜಿಲ್ಲಾಧಿಕಾರಿಗಳು (ಕೃಷಿ ಆಯುಕ್ತರ ಮೂಲಕ)
7. ಸರ್ಕಾರದ ಉಪ ಕಾರ್ಯದರ್ಶಿ -1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು
10. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಮೆ॥ ಮಹಾರಾಷ್ಟ್ರ ಹೈಬ್ರೀಡ್ ಸೀಡ್ಸ್ ಕಂಪನಿ ಲಿಮಿಟೆಡ್ ರೇಷ್ಮಾ ಭವನ್, 4ನೇ ಮಹಡಿ, ನಂ78,ವೀರ ನಾರೀಮನ್ ರಸ್ತೆ, ಮುಂಬೈ-400020.
13. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.